## ಏನಿದು ಫಾಸ್ಟ್ ಫ್ಯಾಷನ್?

ಮಳೆಗಾಲ, ಚಳಿಗಾಲ, ಬೇಸಿಗೆ ಕಾಲಕ್ಕೆ ಬದಲಾಗುತ್ತಿರುವ ಫ್ಯಾಷನ್ ಈಗ ನಿತ್ಯ ನೂತನ. ದಿನಕ್ಕೊಂದು ಟ್ರೆಂಡ್‌ಗಳು ಮಾರುಕಟ್ಟೆಗೆ ಬರುತ್ತಿವೆ. ಬಟ್ಟೆಗಳು ಎಂದಿಗಿಂತ ಅಗ್ಗವೂ ಆಗಿವೆ. ಅಗತ್ಯದ ಪರಿಧಿ ದಾಟಿ, ಬಟ್ಟೆ ಖರೀದಿ ಎಂಬುದು ಮನರಂಜನೆ ಎನ್ನುವ ಮಟ್ಟಕ್ಕೆ ಬದಲಾಗಿದೆ. ಎಲ್ಲಿ ನೋಡಿದರೂ ಬಟ್ಟೆ ಅಂಗಡಿಗಳು. ಈಗಂತೂ ಆನ್‌ಲೈನ್ ಜಮಾನ. ಬಗೆಬಗೆಯ ದಿರಿಸುಗಳನ್ನು ಕುಂತಲ್ಲೇ ಆರ್ಡರ್ ಮಾಡಿದರಾಯಿತು.

ಹೀಗೆ ನಿಧಾನವಾಗಿ ನಮ್ಮನ್ನು ಸೆಳೆದುಕೊಂಡಿದ್ದು ಫಾಸ್ಟ್ ಫ್ಯಾಷನ್. ಫಾಸ್ಟ್ ಫ್ಯಾಷನ್ ಕಂಪನಿಗಳು ಕಡಿಮೆ ಬೆಲೆಯಲ್ಲಿ ಟ್ರೆಂಡಿಯಾದ, ಫ್ಯಾಷನೆಬಲ್ ಆದ ದಿರಿಸುಗಳನ್ನು ಜನರಿಗೆ ಸಿಗುವಂತೆ ಮಾಡಿದವು. ನಾಲ್ಕಾರು ಸಲ ಅವುಗಳನ್ನು ತೊಟ್ಟು ಎಸೆದರಾಯಿತು. ಜಗಮಗಿಸುವ ರ‍್ಯಾಂಪ್ ಮೇಲೆ ಕಂಡ, ತಮ್ಮ ನೆಚ್ಚಿನ ತಾರೆಯರು ತೊಟ್ಟಂಥದ್ದೇ ದಿರಿಸುಗಳನ್ನು ತಕ್ಷಣಕ್ಕೆ ತೊಡುವ ಅವಕಾಶವನ್ನು ಫಾಸ್ಟ್ ಫ್ಯಾಷನ್ ಹೆಸರಿನಲ್ಲಿ ಅನೇಕ ಫ್ಯಾಷನ್ ಬ್ರ್ಯಾಂಡ್‌ಗಳು ನೀಡಿದವು. ಕೈಗೆಟುಕುವ ಬೆಲೆಯಲ್ಲಿ ಸಿಗುತ್ತವೆ ಎನ್ನುವ ಕಾರಣಕ್ಕೆ ಫ್ಯಾಷನ್ ಪ್ರಿಯರೂ ಮುಗಿಬಿದ್ದರು. ಯೂಸ್ ಎಂಡ್ ಥ್ರೋ ಸಂಸ್ಕೃತಿ ಬೆಳೆದಂತೆ ತ್ಯಾಜ್ಯವೂ ಬೆಟ್ಟದಂತೆ ಬೆಳೆಯುತ್ತಿದೆ.



ಇದ್ದರೆ ಹೆಚ್ಚು. ಮಕ್ಕಳಿಗೆ ಹಬ್ಬದ ನೆಪದಲ್ಲಿ ಎರಡು ಬಾರಿ ಹೊಸ ಬಟ್ಟೆ ಸಿಕ್ಕರೆ ಅದೃಷ್ಟ. ಆದರೆ ಈಗ ಹಾಗಿಲ್ಲ. ಬಟ್ಟೆಗಳನ್ನು ಖರೀದಿಸಲು ನಮಗೆ ಕಾರಣಗಳೇ ಬೇಕಿಲ್ಲ. ಖರೀದಿಯೇ ಒಂದು ಕಾರಣವಾಗಿ, ಕಾಲಹರಣದ ಪ್ರಕ್ರಿಯೆಯಾಗಿ ಬದಲಾದ ಸನ್ನಿವೇಶದಲ್ಲಿ ನಾವಿದ್ದೇವೆ. 'ವಿಂಡೋ ಶಾಪಿಂಗ್' ಎಂಬ ಪರಿಕಲ್ಪನೆಯೇ ನಮ್ಮ ಕೊಳ್ಳುಬಾಕ ಸಂಸ್ಕೃತಿಯ ವಿಜಯಪತಾಕೆಯಂತೆ ಕಾಣಿಸುತ್ತದೆ. ಅಗತ್ಯ ಇದೆಯೋ ಇಲ್ಲವೋ ಖರೀದಿ ಒಂದು ರೀತಿಯ ಗೀಳಾಗಿದೆ.

### ಮಹಾಮಾಲಿನ್ಯದ ಮೂಲ

ಒಂದು ಅಂದಾಜಿನ ಪ್ರಕಾರ ಒಬ್ಬ ವ್ಯಕ್ತಿ ವರ್ಷದಲ್ಲಿ ಸರಾಸರಿ 70 ಹೊಸ ಬಟ್ಟೆಗಳನ್ನು ಖರೀದಿಸುತ್ತಾನಂತೆ (ಕೊಳ್ಳುಬಾಕ ಸಂಸ್ಕೃತಿಯನ್ನು ಪ್ರತಿನಿಧಿಸುವ ವ್ಯಕ್ತಿ ಎಂದುಕೊಳ್ಳಿ.) 1980ರ ದಶಕಕ್ಕೆ ಹೋಲಿಸಿದರೆ ಇಂದಿನ ನಮ್ಮ ಖರೀದಿ ಶೇ 400ರಷ್ಟು ಹೆಚ್ಚಾಗಿದೆ. ಖರೀದಿ ಹೆಚ್ಚಾದಂತೆ ಉತ್ಪಾದನೆಯ ಮಟ್ಟವೂ ಹೆಚ್ಚುತ್ತದೆ. ಇದರಿಂದ ಪ್ರಕೃತಿಯ ಮಡಿಲಿಗೆ ಮಾಲಿನ್ಯ ಹೊರೆಯೂ ಹೆಚ್ಚಾಗುತ್ತದೆ.

ಬಟ್ಟೆಗಳಿಂದೇನು ಮಹಾ ಮಾಲಿನ್ಯವಾಗುತ್ತದೆ ಎಂದು ಮೂಗು ಮುರಿಯಬೇಡಿ. ನಂಬಲು ಕಷ್ಟವಾಗಬಹುದು; ಜಾಗತಿಕವಾಗಿ 21 ಲಕ್ಷ ಕೋಟಿ ರೂಪಾಯಿಯಷ್ಟು ಮೊತ್ತದ ವಹಿವಾಟು ನಡೆಸುತ್ತಿರುವ ಜವಳಿ ಉದ್ಯಮ, ಭೂಮಿಯ ಒಡಲನ್ನು ಕಲುಷಿತಗೊಳಿಸುತ್ತಿರುವ ಎರಡನೆಯ ಅತಿದೊಡ್ಡ ಉದ್ಯಮ. ಪ್ರಪಂಚದಾದ್ಯಂತ ಪ್ರತಿವರ್ಷ ಸುಮಾರು 400 ಕೋಟಿ ಪೌಂಡ್‌ಗಳಷ್ಟು ಜವಳಿ ತ್ಯಾಜ್ಯವನ್ನು ಭೂಮಿಗೆ ಎಸೆಯುತ್ತಿದ್ದೇವೆ. ಅಂದರೆ ಸುಮಾರು 18 ಲಕ್ಷ ಟನ್‌ಗಳಷ್ಟು!

ಜವಳಿ ಉದ್ಯಮದಿಂದ ಜಲ ಸಂಪನ್ಮೂಲವೂ ಅತಿಯಾಗಿ ಹಾಳಾಗುತ್ತಿದೆ. ಬಟ್ಟೆಗಳ ಸಂಸ್ಕರಣೆ ಮಾಡಲು ಸರಿಸುಮಾರು 8000 ಬಗೆಯ ರಾಸಾಯನಿಕಗಳು ಬಳಕೆಯಾಗುತ್ತವೆ. ಅವು ಜಲಮಾಲಿನ್ಯ ಉಂಟು ಮಾಡುತ್ತಿವೆ. ಒಂದು ಕೆ.ಜಿ. ಹತ್ತಿಯನ್ನು ಸಂಸ್ಕರಿಸಲು 20 ಸಾವಿರ ಲೀಟರ್ ನೀರು ಬಳಕೆಯಾಗುತ್ತದೆ. ಒಂದು ಕಾಟನ್ ಟಿ ಶರ್ಟ್ ತಯಾರಿಕೆಯಲ್ಲಿ 10 ಸಾವಿರ ಲೀಟರ್ ನೀರು ಬಳಕೆಯಾಗುತ್ತದೆ. ಒಬ್ಬ ವ್ಯಕ್ತಿ ಇಷ್ಟು ಪ್ರಮಾಣದ ನೀರನ್ನು ಸರಿಸುಮಾರು ಎರಡು ದಶಕಗಳ ಕಾಲ ಕುಡಿಯಲು ಬಳಸುತ್ತಾನೆ. ಅಂದರೆ ಹೊಸ ಹೊಸ ಉಡುಪು ಧರಿಸುವ ಸಂಭ್ರಮದಲ್ಲಿ ಮುಂದಿನ ಪೀಳಿಗೆಯ ಯೋಚನೆಯೇ ಇಲ್ಲದೆ ನಾವುಗಳು ನೀರನ್ನು ಪೋಲು ಮಾಡುತ್ತಿದ್ದೇವೆ.

ಇನ್ನು ಗಾಳಿಯಲ್ಲಿ ಸೇರುತ್ತಿರುವ ಕಾರ್ಬನ್ ಪ್ರಮಾಣದ ಶೇ 10ರಷ್ಟು ಬಟ್ಟೆ ಉದ್ಯಮದ್ದೇ ಕೊಡುಗೆ. ಚಿಂದಿಯಾದ, ಅನಗತ್ಯ ಬಟ್ಟೆಗಳನ್ನು ಕೆಲವು ಹಳ್ಳಿಗಳಲ್ಲಿ ಸುಟ್ಟೂ ಹಾಕುತ್ತಾರೆ. ಇವೆಲ್ಲ ಅಪಾಯವಲ್ಲದೆ ಮತ್ತೇನು?


